ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, 3rd April 1975/Chaitra 13, 1897 S.E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Irrigation Facilities from Hemavathi Reservoir

242. SRI B. BYRAPPAJI (Turuvekere).—

Will the Minister of State for Major and Medium Irrigation be pleased to state. :—

(*a*) whether it is a fact that the estimate is prepared for the construction of canals by the department with a view to provide irrigation facilities to Turuvekere, Tiptur, Gubbi, Tumkur and Kunigal Taluks of Tumkur District and Nagamangala Taluk of Mandya District from Hemavathi Reservoir ;

(*b*) if so, the details of canals proposed to be constructed and the estimated cost of the same ;

(*c*) the extent of land coming under irrigation in each of the above taluks after completion of this work ;

(*d*) if there is any financial difficulty in completing the work whether the Government would arrange to take up the work urgently if the farmers who derive benefit come forward to pay advance contribution ?

SRI SUBHASH ASTHURE (Minister of State for Major and Medium Irrigation).—

(*a*) Yes.

(*b*) There are two sub-canals in the Second Stage of Left Bank Channel :—

(i) Tumkur Sub-channel :
Length 170 kms.
Achkut : 2,42,000 Acres (estimate)

(ii) Nagamangala Sub-channel.
Estimated cost : Rs. 4.882 lakhs.
Length : 112 K. Ms.
Achkut ; 2,07,000 Acres (estimate).
Estimated cost : Rs. 2,018 lakhs.

(*c*) The extent of estimated achkut of Second stage Channel :—

TUMKUR DISTRICT

(i) Tiptur Taluk : 29,942 Acres
(the extent of land is only as per the draft estimate, the revised details will be known after examining the same).

(ii) Turuvekere Taluk : 1,01,849 Acres

(iii) Tumkur Taluk : 5,774 Acres

(iv) Kunigal Taluk : 82,333 Acres

MANDYA DISTRICT

(i) Nagamangala Taluk ; 1,03,047 Acres

(ii) Maddur Taluk : 335 Acres

(iii) Mandya Taluk : 29,602 Acres

(*d*) The possibility of taking up the scheme will be examined after taking into consideration the availability of quantum of water when the Cauvery River water dispute is settled.

ಶ್ರೀ ಬಿ ಬೈರಪ್ಪಾಜಿ.—ನಾನು ತುಮಕೂರು ಜಿಲ್ಲೆಯ ತುರುವೇಕೆರೆ, ತಿಪಟೂರು, ಗುಬ್ಬಿ, ತುಮಕೂರು, ಕುಣಿಗಲ್ ಭಾಗಗಳಿಗೆ ನೀರು ಕೊಡುವುದಕ್ಕೆ ಸರ್ವೆ ಮಾಡಿಸಿದ್ದೀರಾ ಎಂದು ಕೇಳಿದರೆ ತಾವು ೪ ತಾಲ್ಲೂಕು ಮಾತ್ರ ಹೇಳಿದ್ದೀರಿ. ಗುಬ್ಬಿಯನ್ನು ಕೈಬಿಟ್ಟಿದ್ದೀರಿ. ಈ ತಾಲ್ಲೂಕಿನಲ್ಲಿ ಎಷ್ಟು ಎಕರೆ ಸುಮಾರು ಅಂದಾಜು ಆಚ್ಚುಕಟ್ಟು ಬರುತ್ತದೆ ?

† ಶ್ರೀ ಸುಭಾಷ್ ಅಸ್ಕೂರೆ —ಗುಬ್ಬಿಯನ್ನು ಕೈಬಿಟ್ಟಿಲ್ಲ. ತುಮಕೂರು ಡಿಸ್ಟ್ರಿಕ್ಟ್ ತಿಪಟೂರು ತಾಲ್ಲೂಕಿನಲ್ಲಿ ೨೯,೯೪೨ ಎಕರೆ ತುರುವೇಕೆರೆ ತಾಲ್ಲೂಕಿನಲ್ಲಿ ೧೧,೮೪೯ ಎಕರೆ ಗುಬ್ಬಿ ತಾಲ್ಲೂಕಿದಲ್ಲಿ ೯೬೧೯ ಎಕರೆ ತುಮಕೂರು ತಾಲ್ಲೂಕಿನಲ್ಲಿ ೫ ೭೭೪ ಎಕರೆ, ಕುಣಗಲ್ ತಾಲ್ಲೂಕಿನಲ್ಲಿ ೮೨,೩೩೨ ಎಕರೆಗಳಂ.

ಶ್ರೀ ಬಿ. ಬೈರಪಾಜಿ.—ತಾವು ಕಾವೇರಿ ಜಲವಿವಾದ ಇತ್ಯರ್ಥ ಆದ ನಂತರ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದಿರಿ. ಈಗಾಗಲೇ ಈ ಪ್ರಾಜೆಕ್ಟ್‌ನಿಂದ ನೀರು ಶೇಖರಣೆಯಾಗಿ ಈ ಪ್ರಾಂತ್ಯಕ್ಕೂ ಕೊಡುವಂತೆ ಅಂದಾಜು ತಯಾರಾಗಿ ಕೆಲಸ ನಡೆದಿದೆ, ಆ ಬಗ್ಗೆ ನಮಗೆ ಕೂಡ ನೀರನ್ನು ಕೊಡತಕ್ಕ ರೀತಿಯಲ್ಲಿ ಅದನ್ನು ಮಾರ್ಪಾಡು ಮಾಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಪ್ರಾಂತ್ಯಕ್ಕೂ ಕೂಡ ಬರತಕ್ಕ ರೀತಿಯಲ್ಲಿ ನೀರು ಸಂಕಷ್ಟ ಇದೆ ಎಂದು ತಿಳಿದುಕೊಂಡಿದ್ದೇನೆ. ಈ ಬಗ್ಗೆ, ತೀವ್ರ ಕಾರ್ಯಕ್ರಮ ತೆಗೆದುಕೊಂಡು ಆದಷ್ಟು ಬೇಗ ಕೆಲಸ ಪ್ರಾರಂಭ ಮಾಡುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ ?

ಶ್ರೀ ಸುಭಾಷ್ ಅಸ್ಕೂರೆ.—ಅಧ್ಯಕ್ಷರೇ, ಮೊದಲು ಈ ಪ್ರಾಜೆಕ್ಟ್‌ನಲ್ಲಿ ೧೯.೫ ಟಿ ಎಂ.ಸಿ.ಎಫ್.ಟಿ. ನೀರು ಶೇಖರಣೆ ಮಾಡಬೇಕು ಎಂದು ಇತ್ತು. ಸೆಕೆಂಡ್ ಸ್ಟೇಜಿನಲ್ಲಿ ತುಮಕೂರು, ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿರತಕ್ಕ ನಾಗಮಂಗಲ ತಾಲ್ಲೂಕಿಗೂ ಕೂಡ ಕೊಡಬೇಕು ಎಂದು ಮಾಡಿದ್ದೇವೆ. ೩೪ ಟಿ.ಎಂ.ಸಿ.ಎಫ್.ಟಿ. ನೀರು ಕೊಡಿ ಎಂದು ಸೆಂಟ್ರಲ್ ಗವರ್ನಮೆಂಟ್‌ಗೆ ಕೇಳಿದ್ದೇವೆ. ಅದು ಸಿಕ್ಕಿತ್ತದೆ ಎನ್ನುವ ಅಂದಾಜಿನಿಂದ ಈ ಪ್ರಾಜೆಕ್ಟ್ ಕೆಲಸಗಳನ್ನು ಮಾಡುತ್ತಿದ್ದೇವೆ. ತಮಕೂರು ಬ್ರಾಂಚ್, ನಾಗಮಂಗಲ ಬ್ರಾಂಚಿಗೆ ನೀರನ್ನು ಕೊಡುವುದನ್ನು ವಿವಾದ ಇತ್ಯರ್ಥವಾದ ನಂತರ ಪರಿಶೀಲಿಸಲಾಗುವುದು.

---

† Indicates that remarks or speeches have not been revised by the member concerned.

ಶ್ರೀ ಗಟ್ಟಿ ಚಂದ್ರಶೇಖರ್.—ಉತ್ತರದಲ್ಲಿ ತಿಪಟೂರು ತಾಲ್ಲೂಕು, ತರುವೇಕೆರೆ ತಾಲ್ಲೂಕು, ತುಮಕೂರು ತಾಲ್ಲೂಕು ಮತ್ತು ಕುಣಿಗಲ್ ತಾಲ್ಲೂಕು ಮಾತ್ರ ಕೊಟ್ಟಿದ್ದೀರಿ. ಗುಬ್ಬಿಯನ್ನು ಬಿಟ್ಟಿದ್ದೀರಿ. ಏಕೆಂದರೆ ಇದು ಗುಬ್ಬಿಯ ಮೇಲೆಯೇ ಹೋಗಬೇಕು. ಆದುದರಿಂದ ಗಬ್ಬಿ ತಾಲ್ಲೂಕಿಗೆ ಎಷ್ಟು ಎಕರೆ ಬರುತ್ತದೆ ಸ್ವಾಮಿ ?

ಶ್ರೀ ಸುಭಾಷ್ ಅಸ್ಕೂರೆ.—ಗುಬ್ಬಿ ಪ್ರಿಂಟಿಂಗ್ ಮಿಸ್ಟೇಕ್ ಆಗಿಬಿಟ್ಟು ಹೋಗಿದೆ, ಇದರಲ್ಲಿ ೯೬,೧೧೮ ಎಕರೆಗಳು ಬರುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ —ಈ ಕಾಮಗಾರಿಗಳನ್ನು ಮುಗಿಸುವುದಕ್ಕೆ ಟೈಂ ಬೌಂಡ್ ಪ್ರೋಗ್ರಾಂನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೇನಾ ? ಎರಡನೆಯದಾಗಿ ಎರಡನೇ ಹಂತದಲ್ಲಿ ತಾವು ಮಾಡಬೇಕು ಎಂದು ಯೋಜನೆ ಮಾಡಿಕೊಂಡಿರತಕ್ಕ ಕೆಲಸ ಕಡಿಮೆ ಖರ್ಚಿನಲ್ಲಿ ಆಗಿ ಹೆಚ್ಚು ಪ್ರಯೋಜನ ಬರುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸುಭಾಷ್ ಅಸ್ಕೂರೆ.—ಮಾನ್ಯ ಸದಸ್ಯರು ಹೇಳಿದಂತೆ ಎರಡನೆ ಸ್ಟೇಜಿನಲ್ಲಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಭಾಗ ಲಾಭವಾಗುತ್ತದೆ. ಆದರಂತೆ ಇಲ್ಲಿ ಮಾಡಿಯಾಗಿಗೆ ಕಾವೇರಿ ನೀರು ಎಷ್ಟು ಸಿಕ್ಕುತ್ತದೆ ಎನ್ನುವುದನ್ನು ನೋಡಿಕೊಂಡು ಮಾಡುತ್ತೇವೆ. ಕ್ರಾಪ್ ಪ್ಯಾಟರನ್ ಚೇಂಜ್‌ಮಾಡಿ ಹೆಚ್ಚು ನೀರು ಕೊಡುವುದಕ್ಕೆ ಪ್ರಯತ್ನ ಮಾಡಲಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಕಾವೇರಿ ನೀರು ಸಿಗುತ್ತದೆ ಎನ್ನುವ ಭರವಸೆ ಮೇಲೆ ಅಂದಾಜು ತಯಾರು ಮಾಡಿಸಿದ್ದೀರಿ, ನೀರು ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಭರವಸೆ ಕೊಟ್ಟಿದ್ದಾರೆ. ನಾನಾದರೂ ಕೂಡ ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುವುದಕ್ಕೆ ಇಷ್ಟ ಪಡುತ್ತೇನೆ ; ಹಣದ ಕೊರತೆ ಏನಾದರೂ ಇದ್ದು ಪ್ರಾರಂಭ ಮಾಡುವುದಕ್ಕೆ ತೊಂದರೆ ಇದ್ದರೆ ಅಡ್ವಾನ್ಸ್ ಕಾಂಟ್ರಿ ಬ್ಯೂಷನ್ ಕೊಡುತ್ತೇವೆ ಎಂದು ನಮ್ಮ ಜಿಲ್ಲೆಯ ಶಾಸಕರು ಎಲ್ಲರೂಕೂಡ ಸೇರಿ ಹೇಳಿದ್ದಾರೆ ಈ ಕೆಲಸ ಅತಿ ಕಡಿಮೆ ಖರ್ಚಿನಲ್ಲಿ ಆಗತಕ್ಕ ಕೆಲಸ, ಸುಮಾರು ಎಕರೆ ೧೫೦೦೦ ಒಳಪಟ್ಟು ಬರತಕ್ಕ ಯೋಜನೆ. ದೊಡ್ಡ ನೀರಾವರಿಯಲ್ಲಿ ಇಷ್ಟು ಕಡಿಮೆ ಖರ್ಚಿನಲ್ಲಿ ಬತಕ್ಕದ್ದು ಬೇರೆ ಯಾವುದೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಕಡಿಮೆ ಖರ್ಚಿನಲ್ಲಿ ಆಗತಕ್ಕ ಈ ಯೋಜನೆಗೆ ಅಡ್ವಾನ್ಸ್ ಕಾಂಟ್ರಿ ಬ್ಯೂಷನ್ ಕೊಡುತ್ತಾರೆ ಎಂದು ರೈತರ ಪರವಾಗಿ ಆಶ್ವಾಸನೆ ಕೊಡುತ್ತೇನೆ. ಕೂಡಲೇ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ವ್ಯವಸ್ಥೆಮಾಡಿ ಕೆಲಸ ಪ್ರಾರಂಭ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಸುಭಾಷ್ ಅಸ್ಕೂರೆ —ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಇದನ್ನು ಸ್ವಾಗತಿಸುತ್ತೇನೆ. ಇದರಂತೆ ಬೇರೆ ಕಡೆಗಳಲ್ಲಿ ಕೂಡ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಣದ ಕೊರತೆ ಇದ್ದರೂ ಕೂಡ ಈ ಕ್ರಾಂಟ್ರಿಬ್ಯೂಷನ್ ಕೊಡುವುದನ್ನು ನೋಡಿದರೆ. ಅದಷ್ಟು ಬೇಗ ಈ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಅನ್ನಿಸುತ್ತದೆ. ಈ ವಿವಾದ ಇತ್ಯರ್ಥವಾಗಿ ಇಲ್ಲಿ ಟಿಎಂಸಿಎಫ್‌ಟಿ ನೀರು ಸಿಗುತ್ತದೋ ಇಲ್ಲವೋ ಎನ್ನುವುದನ್ನು ಪರಿಶೀಲನೆಮಾಡಿ ಆದಷ್ಟು ಬೇಗ ಸರ್ಕಾರ ಇದನ್ನು ತೆಗೆದುಕೊಳ್ಳಬೇಕು ಎನ್ನುವ ನಿರ್ಧಾರಕ್ಕೆ ಬರುತ್ತದೆ.

ಅಧ್ಯಕ್ಷರು.—ಮಿನಿಸ್ಟರು ಗುಬ್ಬಿ ತಾಲ್ಲೂಕು ವಿಚಾರದಲ್ಲಿ ಪ್ರಿಂಟಿಂಗ್ ಮಿಸ್ಟೇಕ್ ಎಂದು ಹೇಳಿದರು, ಉತ್ತರ ಕಳಿಸಿರುವುದರಲ್ಲಿ ಅದು ಇಲ್ಲ. ಆದ್ದರಿಂದ ಅದು ತಮ್ಮಿಂದ ಬಿಟ್ಟು ಹೋಗದೆ. ಪ್ರಿಟಿಂಗ್ ಮಿಸ್ಟೇಕ್ ಅಲ್ಲ.

ಶ್ರೀ ಘಟ್ಟಿ ಚಂದ್ರಶೇಖರ್.—ಅಡ್ವಾನ್ಸ್ ಕಾಂಟ್ರಿಬ್ಯೂಷನ್‌ನನ್ನು ತುಮಕೂರು ಜಿಲ್ಲೆಗೆ ಕೊಡುತ್ತಾರೆಂದು ಒಪ್ಪಿದ್ದಾರೆ. ಇದರ ಬಗ್ಗೆ ಆರ್ಡರ್ ಮಾಡಿ ಬೇರೆ ಹೆಡ್ ಮಾಡಿದರೆ ದುಡ್ಡು ಸಕಾಲದಲ್ಲಿ ಸಿಗುವಂತೆ ಮಾಡಿ ಕೊಡುವುದಕ್ಕೆ ಆಗುತ್ತದೆ. ಮಂತ್ರಿಯವರೂ ಉತ್ತರದಲ್ಲಿ ಪರಿಶೀಲಿಸಲಾಗುವುದು, ಯೋಚನೆ ಮಾಡಲಾಗುವುದು ಎಂದು ಹೇಳುತ್ತಲೇ ಬಂದಿದ್ದಾರೆ. ಇದು ಯಾವ ಕಾಲಕ್ಕೆ ಪರಿಶೀಲಿಸುತ್ತಾರೆ ? ೨೫ ವರ್ಷಗಳಿಂದ ಪರಿಶೀಲಿಸುತ್ತೇವೆಂದು ಹೇಳುತ್ತಾ ಇದ್ದಾರೆ. ಈಗಲೂ ಆಗಲ್ಲೆಲ್ಲ.

ಶ್ರೀ ಸುಭಾಷ್ ಅಸ್ಕೂರೆ.—ಟೈಮ್ ಬೌಂಡ್ ಪ್ರೋಗ್ರಾಮ್ ಒಳಗಡೆ ಇದನ್ನು ಮುಗಿಸಬೇಕೆಂದು ಯೋಚನೆ ಇದೆ. ಮಾನ್ಯ ಸದಸ್ಯರು ಹೇಳಿದಂತೆ ಹೆಡ್ ಕ್ರಿಯೇಟ್ ಮಾಡಿ ಕಲೆಕ್ಟ್ ಮಾಡಿ ಎಂದು ಸಲಹೆ ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಆದರೆ ಒಂದು ವಿಷಯವನ್ನು ಮಾನ್ಯಸದಸ್ಯರ ಗಮನಕ್ಕೆ ತರಬೇಕು ಏನೆಂದರೆ, 3 years out of 4 years ಸರ್‌ಪ್ಲಸ್ ಇದ್ದೇಇರುತ್ತದೆ. ಆ ಟೈಮ್‌ನಲ್ಲಿ ಮಾಡಬೇಕೆಂದು ಇದೆ. ಈ ಒಂದು ವಿಚಾರದಲ್ಲಿ ಸಕೆಂಡ್ ಸ್ಟೇಜ್‌ನಲ್ಲಿ ಹುಡುಕಿ ವರಿಯುತ್ತೇವೆ.

SRI M. H. JAYAPRAKASH NARAYANA.—I have been authri ed to put Question No 334.

MADAM SPEAKER,—The hon. member can put the Question on behalf of Sri G. Puttaswamy.

Amendment to Land Grant Rules.

334. SRI M. H. JAYAPRAKASH NARAYANA (Sirs) —(On behalf of SRI G. PUTTASWAMY (Mudigere).—Will the Minister for Revenue be pleased to state:—

(*a*) whether it has come to the notice of the Government that Harijans and Girijans find it difficult to pay the upset price of Rs. 100 per acre for wet land and Rs. 50 per acre for dry land ;

(*b*) whether the Government would make provision in the Land Grant Rules for giving dry land free of cost with retrospective effect from 1961 to the Harijans and Girijans who hold Darakhasth land as in the case of freedom Fighters and armed services for whom provision has been made in the Land Grant Rules for giving dry land free of cost ?

SRI N. HUTCHAMASTHY GOWDA (Minister for Revenue).—

(*a*) No.

(*b*) There is no provision in the Land Grant Rules for grant of Dry lands free of cost to the Freedom Fighters, but 75 per cent of the cost of the land sanctioned to the Harijans and Girijans may be waived by the sanctioning authority as per Rule 12 of Land Grant Rules. But these subject to the condition that the amount waived shall not exceed Rs 500 and order may be passed by the said authority to recover the balance amount in three instalments. In view of the above reasons, it is not necessary to provide other facilities in the Land Grant Rules.

ಶ್ರೀ ಎಚ್. ಎಂ. ಜಯಪ್ರಕಾಶ್ ನಾರಾಯಣ್ —"Whether it has come to the notice of the Government that Harijans and Girijans find it difficult to pay the upset price of Rs 100 per acre for Wet land and Rs. 50 per acre for dry land" ಎಂದು ಕೇಳಿರುವುದಕ್ಕೆ 'ಇಲ್ಲ" ಎಂದು ಉತ್ತರ ಹೇಳಿದ್ದೀರಿ. ೧೦೦ ರೂಪಾಯಿ ಮತ್ತು ೫೦ ರೂಪಾಯಿಗಳನ್ನು ತಾವು ನಿಗದಿ ಮಾಡಿದ್ದೀರಿ. ಲ್ಯಾಂಡ್ ಗ್ರಾಂಟ್ ರೂಲ್ಸ್ ಬಂದಾಗ್ಗೆ ಆಗಿನಿಂದ ನಿರ್ಗತಿಕ ಬಡವರಿಗೆ ಕೊಟ್ಟಂಥ ಜಮೀನು ಅವರಿಗೆ ಸಿಕ್ಕಿಲ್ಲ. ಅವರಿಗೆ ಸಿಕ್ಕುವಂತೆ ಮಾಡಬೇಕಾದರೆ ಪರಿಹಾರ ಒದಗಿಸತಕ್ಕದ್ದು ಅವಶ್ಯಕ ಅಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರಲ್ಲಿ ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಸ್ಪಷ್ಟವಾಗಿ ಇದೆ ಅವರು ಕಿಮ್ಮತ್ತು ಗೊತ್ತುಮಾಡಿದರಮೇಲೆ ಶೇಕಡ ೭೫ರವರೆಗೆ ವೈವ್ ಮಾಡುವುದಕ್ಕೆ ಗ್ರಾಂಟ್ ಮಾಡತಕ್ಕಂಥ ಕೇಸಿಗೆ ಇರುವಷ್ಟನ್ನು ಕೊಡದೆ ತೊಂದರೆಯಾಗಿ ಗ್ರಾಂಟನ್ನು ತಮ್ಮ ಸ್ವಂತಕ್ಕೆ ತೆಗೆದು ಕೊಳ್ಳದೇ ಇರತಕ್ಕ ಸಂದರ್ಭಗಳು ಗಮನಕ್ಕೆ ಬಂದಿಲ್ಲ ಎಂದು ಅರ್ಥವೇ ಹೊರತು ಮತ್ತೆ ಬೇರೆ ಏನೂ ಇಲ್ಲ. ಎಲ್ಲೆಲ್ಲಿ ಆ ತರಹ ಮಂಜೂರಾಗಿ ಬಂದಿದೆಯೋ ಅಂತಹ ಸಂದರ್ಭದಲ್ಲಿ ಆ ಕೇಸನ್ನು ಲ್ಯಾಂಡ್ ಗ್ರಾಂಟ್ ರೂಲ್ಸನ್ನು ಅನುಸರಿಸಿ ವಿನಾಯಿತಿ ಕೊಟ್ಟು ತೆಗೆದುಕೊಳ್ಳುತ್ತಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಪೂರಾ ಕಿಮ್ಮತ್ತನ್ನು ವಿಧಿಸಲೇಬಾರದು ಎಂದು ಸಲಹೆ ಕೊಟ್ಟಿದ್ದಾರೆ. ಶೇಕಡ ೭೫ರವರೆಗೂ ವೈವ್ ಮಾಡತಕ್ಕ ಸಂದರ್ಭ ಇರುವುದರಿಂದ ಇದರ ಅವಶ್ಯಕತೆ ಇರಲಾರದೆಂದು ನನ್ನ ಭಾವನೆ.